ನೀರು ಶುದ್ಧೀಕರಣ ಘಟಕ ಸ್ಥಾಪನೆಗೆ ಸಮ್ಮತಿ ಪತ್ರ ಪಡೆಯಬೇಕಾಗಿರುತ್ತದೆ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

1298 ಶ್ರೀ ಸಿದ್ದು ಸವದಿ (ಜಮಖಂಡಿ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಪ ನೋಂದಣಿ ಕಛೇರಿಯನ್ನು ಹೊಸದಾಗಿ ಪ್ರಾರಂಭಿಸಲು ಇರುವ ನಿಯಮಾವಳಿಗಳೇನು,

ಆ) ಜಮಖಂಡಿ ತಾಲ್ಲೂಕಿನಲ್ಲಿ ಬೇರೆ ಕಡೆ ಅಂದರೆ ಹೋಬಳಿ ಮಟ್ಟದಲ್ಲಿ ಉಪ ನೋಂದಣಿ ಕಛೇರಿ ಪ್ರಾರಂಭಿಸಲು ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ ಎಲ್ಲಿ ಮತ್ತು ಯಾವಾಗ ಪ್ರಾರಂಭಿಸಲಾಗುವುದು,

ಈ) ರಾಜ್ಯದಲ್ಲಿ ಈ ಬಾರಿ ಎಷ್ಟು ಕಛೇರಿಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿರುತ್ತದೆ?

ಮಾನ್ಯ ಕಂದಾಯ ಸಚಿವರು

ಅ) ಹೊಸ ಉಪ ನೋಂದಣಿ ಕಛೇರಿಗಳನ್ನು ಸ್ಥಾಪಿಸಲು ಯಾವುದೇ ನಿರ್ದಿಷ್ಟ ನಿಯಮಗಳು ಇರುವುದಿಲ್ಲ ಸಾರ್ವಜನಿಕ ಹಿತದೃಷ್ಟಿ ಹಾಗೂ ಈ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಉಪ ನೋಂದಣಿ ಕಛೇರಿಗಳನ್ನು ತೆರೆಯಲು ಪರಿಶೀಲಿಸಲಾಗುತ್ತಿದೆ

1) ಸಂಬಂಧಪಟ್ಟ ವಿಭಾಗದಲ್ಲಿ ನೋಂದಣಿಯಾಗುತ್ತಿರುವ ದಸ್ತಾವೇಜುಗಳ ಸಂಖ್ಯೆ

2) ಸಮೀಪದಲ್ಲಿನ ಉಪ ನೋಂದಣಿ ಕಛೇರಿಗೆ ಇರುವ ಅಂತರ

3) ಹೊಸ ಉಪ ನೋಂದಣಿ ಕಛೇರಿ ತೆರೆಯುವುದರಿಂದಾಗಿ ಸಂಗ್ರಹವಾಗಲಿರುವ ರಾಜಸ್ವ

ಆ) ಹೌದು

ಇ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನಲ್ಲಿ ಹಿಂದಿನ 3 ವರ್ಷಗಳಲ್ಲಿ ನೋಂದಾದ ದಸ್ತಾವೇಜುಗಳ ಸರಾಸರಿ ಸಂಖ್ಯೆ 8,335 ಅವುಗಳಲ್ಲಿ ತೇರದಾಳ್ ಪಟ್ಟಣ ವ್ಯಾಪ್ತಿಗೆ ಬರುವ ಗ್ರಾಮಗಳಿಂದ ಹಿಂದಿನ 3 ವರ್ಷಗಳಲ್ಲಿ ನೋಂದಣಿಯಾಗಿರುವ ದಸ್ತಾವೇಜುಗಳ ಸಂಖ್ಯೆ 2162 ಇದರಿಂದಾಗಿ, ತೇರದಾಳ್ ಪಟ್ಟಣದಲ್ಲಿ ಉಪ ನೋಂದಣಿ ಕಛೇರಿಯನ್ನು ಮೂಲಭೂತ ಸೌಕರ್ಯಗಳನ್ನು ಒದಗಿಸಿದ ನಂತರ ಪ್ರಾರಂಭಿಸಲು ಕ್ರಮ ಜರುಗಿಸಲಾಗುವುದು

ಈ) ಪ್ರಸಕ್ತ ಸಾಲಿನಲ್ಲಿ ವಿವಿಧ ಸ್ಥಳಗಳಲ್ಲಿ 9 ಉಪ ನೋಂದಣಿ ಕಛೇರಿಗಳನ್ನು ಪ್ರಾರಂಭಿಸಲು ತಾತ್ವಿಕವಾಗಿ ಅನುಮೋದನೆ ನೀಡಿದೆ

1381 ಶ್ರೀ ಬಸವರಾಜು ಎ ಎಸ್ (ಅರಸೀಕೆರೆ) – ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಕರ್ನಾಟಕ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಕುರಿತು ನಡೆಸುವ ಸಭೆಗಳು ವರ್ಷಕ್ಕೆ ಎಷ್ಟು ಬಾರಿ ನಡೆಯುತ್ತವೆ,

ಆ) ಈ ಸಭೆಗಳಿಗೆ ಅಪೇಕ್ಷಿತರಿರುವ ಇಲಾಖೆ ಹಾಗೂ ಅಧಿಕಾರಿಗಳು ಯಾರ್ಯಾರು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳುಈ ಸಭೆಯಲ್ಲಿ ಹಾಜರಿರುವಂತೆ ಸೂಚನೆ ನೀಡಲಾಗಿದೆಯೇ,

ಇ) ಹಾಗಿಲ್ಲದಿದ್ದಲ್ಲಿ, ಜಿಲ್ಲಾ ಮಟ್ಟದ ಸಭೆಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಜರಾಗುತ್ತಿರುವುದು ನಿಜವೇ,

ಈ) ನಿಜವಾಗಿದ್ದಲ್ಲಿ, ಅರಸೀಕೆರೆ ತಾಲ್ಲೂಕು ಒಳಗೊಂಡಂತೆ ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ವಾರದಲ್ಲಿ 3–4 ಬಾರಿ ಸಭೆಗೆಂದು ಹೋಗುತ್ತಿರುವುದರ ಔಚಿತ್ಯವೇನು,

ಉ) ಇದರಿಂದಾಗಿ ಕಛೇರಿಗಳಲ್ಲಿ ಅಧಿಕಾರಿಗಳಿಲ್ಲದೆ ಸಾರ್ವಜನಿಕರ ಹಾಗೂ ಅಭಿವೃದ್ಧಿ ಕೆಲಸ ಕಾರ್ಯಗಳು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಸದರಿ ಸಭೆಗಳನ್ನು ನಡೆಸಲು ಇರುವ ಮಾರ್ಗಸೂಚಿ ಮಾನದಂಡಗಳೇನು,